KATK010046322018

## **ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು**

**ಸ್ಪೆಷಲ್ ಕೇಸ್ ನಂ. 384/2018**

| | | |
|---|---|---|
| ಹೆಸರು | ದೀಪಕ್ ಸಿ. ಬೂದಿಹಾಳ್ | ಪ್ರಾಸಾ- 7 |
| ತಂದೆಯ ಹೆಸರು | ಲೇಟ್ ಚಂದ್ರಶೇಖರ್ | ಚಾಸಾ- |
| ವಯಸ್ಸು | 35 ವರ್ಷ | |
| ಉದ್ಯೋಗ | ಗ್ರಾಮ ಲೆಕ್ಕಾಧಿಕಾರಿ , ಕೆರಗೋಡಿ ವೃತ್ತ , ಕಸಬಾ ಹೋಬಳಿ, ತಿಪಟೂರು ತಾಃ | |
| ವಾಸಸ್ಥಳ | ತಿಪಟೂರು | |

ದಿನಾಂಕಃ **28-06-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದಃ-**

ನಾನು 2008 ರಿಂದ ಕೆರಗೋಡಿ ವೃತ್ತದಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ವಿಳಾಸದಲ್ಲಿ ಕೋಳಾಲ ವೃತ್ತ ಎಂದು ತೋರಿಸಲಾಗಿದೆ. ಕಸಬಾ ಹೋಬಳಿಯ ಕಂದಾಯದ ತನಿಖಾಧಿಕಾರಿಗಳು ಬೆಸ್ಕಾಂ ಪೊಲೀಸರು ಸತೀಶ್ ಬಿನ್ ಶಿವನಂಜಪ್ಪ ಇವರ ಹೆಸರಿನಲ್ಲಿ ಕೆರಗೋಡಿ ಗ್ರಾಮದಲ್ಲಿ ಜಮೀನು ಇದೆಯೇ ಹೇಗೆ ಎಂದು ಕೇಳಿದರು. ನಾನು ಪರಿಶೀಲನೆ ಮಾಡಿ ನೋಡಿದಾಗ ಕೆರಗೋಡಿ ಗ್ರಾಮದ ಸರ್ವೆ ನಂಬರ್ 268 ರಲ್ಲಿ ಕೆಂಪನಂಜಮ್ಮ ಕೋಂ ಶಿವನಂಜಪ್ಪ ರವರ ಹೆಸರಿನಲ್ಲಿ ಇರುವ ಜಮೀನಿನಲ್ಲಿ ಸತೀಶ್ ಎಂಬುವವರು ವಿಭಾಗದಂತೆ ಅನುಭವ ಹೊಂದಿದ್ದಾರೆ. ಅವರ ಹೆಸರಿನಲ್ಲಿ ದಾಖಲಾತಿಗಳು ಇರುವುದಿಲ್ಲ. ದಾಖಲಾತಿಗಳು ಕೆಂಪನಂಜಮ್ಮ ರವರ ಹೆಸರಿನಲ್ಲಿ ಇವೆ. ಕೆಂಪನಂಜಮ್ಮ ಈಕೆಯು ಸತೀಶ್ ರವರ ತಾಯಿ. ಆ ಜಮೀನಿನಲ್ಲಿ ಒಂದು

ಕೊಳವೆ ಬಾವಿ ಇದೆ. ನಾನು ಇದರ ಬಗ್ಗೆ ವರದಿ ಮತ್ತು ಪಹಣಿ ಪತ್ರಿಕೆಯನ್ನು ಕಂದಾಯದ ತನಿಖಾಧಿಕಾರಿಯವರಿಗೆ ನೀಡಿದೆನು. ವರದಿಯನ್ನು ನಿಪಿ-8 ಎಂದು , ಪಹಣಿಯನ್ನು ನಿಪಿ-9 ಎಂದು ಗುರುತಿಸಲಾಗಿದೆ. ಸ.ನಂ. 268 ರಲ್ಲಿ 4 ಎಕರೆ 38 ಗುಂಟೆ ಜಮೀನು ಕೆಂಪನಂಜಮ್ಮ ರವರ ಹೆಸರಿನಲ್ಲಿದೆ.

**ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ**

ಬೆಸ್ಕಾಂ ಅಧಿಕಾರಿಗಳು ನನಗೆ ಪತ್ರ ಬರೆದಿರುವುದಿಲ್ಲ. ಕಂದಾಯದ ತನಿಖಾಧಿಕಾರಿಗಳು ನನಗೆ ಮೌಖಿಕವಾಗಿ ವಿಚಾರವನ್ನು ತಿಳಿಸಿದರು. ನಿಪಿ-8 ವರದಿಯಲ್ಲಿ ನಾನು ನಮೂದಿಸಿರುವ ಬೆಸ್ಕಾಂ ಪತ್ರದ ಸಂಖ್ಯೆಯನ್ನು ಕಂದಾಯದ ತನಿಖಾಧಿಕಾರಿಗಳು ನನಗೆ ತಿಳಿಸಿದರು. ಬೆಸ್ಕಾಂ ರವರ ಪತ್ರವನ್ನು ನಾನು ನೋಡಿರುವುದಿಲ್ಲ. ವರದಿಯಲ್ಲಿ ಸತೀಶ್ ಇವರು ಅನುಭವ ಇರುವುದು ತೋರಿಸಿಲ್ಲ ಎಂದರೆ ಸರಿಯಲ್ಲ. 2017-2018 ರಲ್ಲಿ ತಿಪಟೂರು ತಾಲ್ಲೂಕಿನಲ್ಲಿ ಬರಗಾಲ ಇತ್ತು ಎಂದರೆ ಸರಿ. ಕಂದಾಯದ ತನಿಖಾಧಿಕಾರಿಗಳು ಹೇಳಿದ ರೀತಿಯಲ್ಲಿ ನಾನು ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸತೀಶ್ ರವರ ಅನುಭವದಲ್ಲಿ ಸ.ನಂ. 268 ಇರಲಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಿಂದಃ**

ಕೆಂಪನಂಜಮ್ಮ ಇವರ ಹೆಸರಿನಲ್ಲಿ ಇರುವ ಜಮೀನು ವಿಭಾಗವಾಗಿದೆ ಎಂಬ ಬಗ್ಗೆ ಸತೀಶ್ ರವರ ಅಣ್ಣ-ತಮ್ಮಂದಿರಾದ ಪ್ರಮೋದ , ಸಿದ್ದಪ್ಪ ಇವರು ತಿಳಿಸಿದರು. ನಾನು ಸ್ಥಳಕ್ಕೆ ಹೋಗದೇ ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು